ಮೇಲೆ ಸಿಬಿಐ ತನಿಖೆ ಆದೇಶಿಸಿದ ಸರ್ಕಾರ, ದೇವಸ್ ಕಂಪನಿ ವಿರುದ್ಧ ಜಾರಿ ನಿರ್ದೇಶನಾಲಯದ ಮೂಲಕ ವಿಚಾರಣೆ ಮಾಡುವಂತೆ ಆದೇಶ ನೀಡಿತು.

2019ರಲ್ಲಿ ಭಾರತದ ಸುಪ್ರೀಂ ಕೋರ್ಟ್ ದೇವಸ್‌ಗೆ ಮಾಡಿರುವ ಹಣ ವರ್ಗಾವಣೆಯಲ್ಲಿ ಗಂಭೀರ ಲೋಪಗಳಾಗಿವೆ ಎಂದು ಹೇಳಿ ಸರ್ಕಾರದ ಮನವಿಯ ಮೇರೆಗೆ ತೀರ್ಪನ್ನು ಕಾಯ್ದಿರಿಸಿತು. ದಂಡ ವಸೂಲಿ ಅಥವಾ ಕಟ್ಟುವ ವಿಷಯದ ಮಧ್ಯಸ್ತಿಕೆಯಲ್ಲೂ ಅವ್ಯವಹಾರ ನಡೆದಿದೆ ಎಂಬುದು ಕೋರ್ಟ್‌ನ ಅಭಿಪ್ರಾಯವಾಗಿತ್ತು. 2020ರಲ್ಲಿ ಇದೇ ಕೇಸಿನ ಮೇಲೆ ತೀರ್ಪು ನೀಡಿದ ವಾಷಿಂಗ್ಟನ್ ನ್ಯಾಯಾಲಯ 2015ರಲ್ಲಿ ಐಸಿಸಿ ವಿಧಿಸಿದ್ದ ದಂಡ ಪರಿಹಾರದ ಜೊತೆ ಬಡ್ಡಿಯನ್ನೂ ನೀಡಬೇಕೆಂದು ಆದೇಶ ನೀಡಿತು.

2021ರಲ್ಲಿ ನ್ಯಾಷನಲ್ ಕಂಪನಿ ಲಾಟ್ರಿಬ್ಯುನಲ್, ದೇವಸ್ ಕಂಪನಿಯು ಮೋಸದ ಹಾಗೂ ಕಾನೂನುಬಾಹಿರ ಕೆಲಸಗಳಿಗೆಂದೇ ರೂಪುಗೊಂಡಿದ್ದು, ಅದನ್ನು ಈ ಕೂಡಲೇ ಮುಚ್ಚಬೇಕು ಎಂದು ಆದೇಶ ನೀಡಿತು. ಅದೇ ವರ್ಷ ನ್ಯೂಯಾರ್ಕ್‌ನ ನ್ಯಾಯಾಲಯದಲ್ಲಿ ದಾವೆ ಹೂಡಿದ ದೇವಸ್ ಕಂಪನಿ, ಅಮೆರಿಕದಲ್ಲಿರುವ 'ಏರ್ ಇಂಡಿಯ' ವಿಮಾನ ಸಂಸ್ಥೆಯ ಆಸ್ತಿಯನ್ನು ಮುಟ್ಟುಗೋಲು ಹಾಕಬೇಕೆಂದು ಮನವಿ ಸಲ್ಲಿಸಿತು. 2022ರಲ್ಲಿ ದೇವಸ್ ಕಂಪನಿಯ ಷೇರುದಾರರು ಕಳೆದ ಡಿಸೆಂಬರ್‌ನಲ್ಲಿ ಕೆನಡಾದ ನ್ಯಾಯಾಲಯ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾದ ಆಸ್ತಿಯನ್ನು ಮುಟ್ಟುಗೋಲು ಹಾಕಲು ಆದೇಶ ನೀಡಿದೆ, ಅದರ ಒಟ್ಟು ಮೊತ್ತ 30 ದಶಲಕ್ಷ ಡಾಲರ್‌ನಷ್ಟಿದೆ ಎಂದು ಹೇಳಿಕೆ ನೀಡಿದ್ದಾರೆ. ಈ ತೀರ್ಪಿನ ವಿರುದ್ಧ ಭಾರತ ವಿಮಾನ ನಿಲ್ದಾಣ ಪ್ರಾಧಿಕಾರ ಮೇಲ್ಮನವಿ ಸಲ್ಲಿಸಿದೆ.

ಜನವರಿ 17, 2022ರಂದು ತೀರ್ಪು ಪ್ರಕಟಿಸಿದ ನಮ್ಮ ಸುಪ್ರೀಂ ಕೋರ್ಟ್ ಆಂಟ್ರಿಕ್ಸ್ ಮತ್ತು ದೇವಸ್ ನಡುವಿನ ಮೂಲದಲ್ಲಿಯೇ ಮೋಸದ ಒಪ್ಪಂದವಾಗಿದ್ದರಿಂದ ನಂತರದ ಎಲ್ಲ ಕೆಲಸಗಳೂ, ವಿವಾದ, ಪರಿಹಾರ, ಎಲ್ಲವೂ ಮೋಸದ ಜಾಲದ ಎಳೆಗಳಷ್ಟೇ ಎಂದು ಅಭಿಪ್ರಾಯ ಹೇಳಿತು.

ಆರೋಪಿಗಳೆನಿಸಿದ್ದ ಮಾಧವನ್ ನಾಯರ್ ಮತ್ತು ಇತರರನ್ನು ಸರ್ಕಾರದ ಅಣತಿಯಂತೆ ವಿಚಾರಣೆ ನಡೆಸಿದ ಹಿರಿಯ ವಿಜ್ಞಾನಿ ರೊದ್ದಂ ನರಸಿಂಹ – 'ಹಣ ವರ್ಗಾವಣೆಯು ಅವಸರದಲ್ಲಾಗಿದೆಯಷ್ಟೇ, ನಮ್ಮ ವಿಜ್ಞಾನಿಗಳು ಯಾವುದೇ ರೀತಿಯ ಮೋಸದಲ್ಲಿ ಭಾಗಿಯಾಗಿಲ್ಲ' ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಇಷ್ಟೆಲ್ಲ ಕಾನೂನು ಹೋರಾಟ ಮತ್ತು ರಗಳೆಗಳಿಂದ ಅಂತರರಾಷ್ಟ್ರೀಯ ವೇದಿಕೆಯಲ್ಲಿ ಭಾರತದ ಬಗೆಗಿನ ಅಭಿಪ್ರಾಯದಲ್ಲಿ ವ್ಯತ್ಯಾಸವಾದದ್ದಂತೂ ಸತ್ಯ.

ಈಗಿನ ಸರ್ಕಾರ ಬಾಹ್ಯಾಕಾಶಕ್ಕೆ ಸಂಬಂಧಿಸಿದ ಎಲ್ಲ ಕೆಲಸಗಳಲ್ಲೂ ಖಾಸಗಿ ಸಹಭಾಗಿತ್ವಕ್ಕೆ ಬಾಗಿಲು ತೆರೆದಿದೆ. ನೇರ ವಿದೇಶೀ ಬಂಡವಾಳವೂ ಬರಲಿ ಎಂದು ಕಾಯುತ್ತಿದೆ. ದೇವಸ್–ಆಂಟ್ರಿಕ್ಸ್ ವಿವಾದದಲ್ಲಿ ಭಾರತದ ಪ್ರಮುಖ ವಿಜ್ಞಾನಿಗಳ ಬಗ್ಗೆಯೇ ಅನುಮಾನದ ಮಾತು ಕೇಳಿಬಂದು ಇಡೀ ಬೌದ್ಧಿಕವಲಯವೇ ತಲೆತಗ್ಗಿಸುವಂತಾಗಿತ್ತು.

ಮತ್ತು ಅಭಿವೃದ್ಧಿ ಕೆಲಸಗಳನ್ನು ನಿರ್ಲಕ್ಷಿಸಿದರೆ ಕಳೆದ ಐದು ದಶಕಗಳಿಂದ ಇಸ್ರೋ ಮಾಡಿರುವ ಕೆಲಸಕ್ಕೆ ಅವಮಾನ ಮಾಡಿದಂತಾಗುತ್ತದೆ.

ನಾಸಾದವರು ಲಾಕ್‌ಹೀಡ್ ಮಾರ್ಟಿನ್ ಜೊತೆ ಸೇರಿ X–33 ಗಗನನೌಕೆ ಅಭಿವೃದ್ಧಿ ಪಡಿಸಲು 912 ದಶಲಕ್ಷ ಡಾಲರ್ ಬಂಡವಾಳ ಹೂಡಿದ್ದರು. ಲಾಕ್‌ಹೀಡ್ ಮಾರ್ಟಿನ್ 357 ದಶಲಕ್ಷ ಡಾಲರ್ ಹಣ ತೊಡಗಿಸಿತ್ತು. ಅದು ಯಶಸ್ಸು ಕಾಣಲಿಲ್ಲ. ನಮ್ಮ ಸರ್ಕಾರದ ಅಂಟ್ರಿಕ್ಸ್ ಸಂಸ್ಥೆ ಖಾಸಗಿ ಸಂಸ್ಥೆ ದೇವಸ್‌ನೊಂದಿಗೆ ಮಾಡಿಕೊಂಡಿದ್ದ ಒಪ್ಪಂದ ಕಾರಣಾಂತರಗಳಿಗೆ ಮುರಿದುಬಿದ್ದು, ಪ್ರಕರಣ ಅಂತರರಾಷ್ಟ್ರೀಯ ನ್ಯಾಯಾಲಯದವರೆಗೂ ತಲುಪಿ ಭಾರತಕ್ಕೆ ಭಾರೀ ಮುಖಭಂಗವಾದದ್ದನ್ನೂ ನಾವು ಮರೆಯುವಂತಿಲ್ಲ. ದೇವಸ್‌ನವರು ಕೇಸನ್ನು ವಿವಿಧ ನ್ಯಾಯಾಲಯಗಳಲ್ಲಿ ಮುಂದುವರೆಸುತ್ತಲೇ ಇದ್ದಾರೆ.

## ಇಸ್ರೊ ಜೊತೆ ಜೊತೆಯಲಿ...

**ಅಗ್ನಿಕುಲ್ ಕಾಸ್ಮೊಸ್:** ಐದು ವರ್ಷಗಳ ಹಿಂದೆ ಚೆನ್ನೈನಗರದಲ್ಲಿ ಪ್ರಾರಂಭವಾದ ಈ ನವೋದ್ಯಮ ವಾರಕ್ಕೆರಡು ರಾಕೆಟ್ ಎಂಜಿನ್ ತಯಾರಿಸುವ ಸಾಮರ್ಥ್ಯ ಹೊಂದಿದೆ. '3 D' ಮುದ್ರಣ ತಂತ್ರಜ್ಞಾನ ಬಳಸಿ ರಾಕೆಟ್ ಎಂಜಿನ್ ತಯಾರಿಸುವ ಕ್ಷಮತೆಯುಳ್ಳ ಅಗ್ನಿಕುಲ್ ಈ ವರ್ಷಾಂತ್ಯಕ್ಕೆ ನೂರು ಕಿಲೋ ಗ್ರಾಂ ತೂಕದ 700 ಕಿ.ಮೀ. ಎತ್ತರದ ದೂರ ಕ್ರಮಿಸುವ ಅತ್ಯಂತ ಹಗುರ 'ಅಗ್ನಿಬಾನ್' ರಾಕೆಟ್ ಉಡಾಯಿಸುವ ಯೋಜನೆ ಹಾಕಿಕೊಂಡಿದೆ.

ಉಕ್ರೇನ್ ಯುದ್ಧದಲ್ಲಿ ಬ್ಯುಸಿಯಾಗಿರುವ ರಷ್ಯಾ, ಬಾಹ್ಯಾಕಾಶಕ್ಕೆ ಸಂಬಂಧಿಸಿದ ಬೇರೆ ದೇಶಗಳ ಯಾವ ಬೇಡಿಕೆಯನ್ನೂ ಪೂರೈಸಲಾಗದ ಸ್ಥಿತಿಯಲ್ಲಿರುವುದರಿಂದ 'ಅಗ್ನಿಕುಲ್' ಅನ್ನು ಸಂಪರ್ಕಿಸುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಒಂದು ವಾರದಲ್ಲಿ ರಾಕೆಟ್ ಎಂಜಿನ್ ತಯಾರಾದರೆ, ಎರಡನೆಯ ವಾರದಲ್ಲಿ ಉಡಾವಣೆಯ ಸಿದ್ಧತೆ ಮಾಡಿಕೊಂಡು, ಮೂರನೇ ವಾರದಲ್ಲಿ ರಾಕೆಟ್ ಉಡಾಯಿಸುವುದೇ ಇದರ ಮುಂದಿನ ಹೆಜ್ಜೆ.

ಇಸ್ರೋದವರು ತಯಾರಿಸುತ್ತಿರುವ SSLV – ಸ್ಮಾಲ್ ಸ್ಯಾಟಲೈಟ್ ಲಾಂಚ್ ವೆಹಿಕಲ್‌ನ ತೂಕ 300 ಕೇಜಿಯಷ್ಟಾದರೆ, 'ಅಗ್ನಿಬಾನ್'ನ ತೂಕ 100 ಕೆ.ಜಿ. ಮಾತ್ರ. ತೂಕವಷ್ಟೇ ಕಡಿಮೆಯಲ್ಲ, ತಯಾರಿಗೆ ತಗಲುವ ವೆಚ್ಚವೂ ಕಡಿಮೆಯಾದ್ದರಿಂದ ಉಪಗ್ರಹ ಆಧರಿತ ಇಂಟರ್ನೆಟ್ ಸೇವೆ–ಸಂಪರ್ಕ ಬಯಸುವ ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳು ತಮ್ಮದೇ ಹೆಸರಿನ ಸ್ವಂತ ಉಪಗ್ರಹಗಳನ್ನು ಕಕ್ಷೆಗೆ ಕಳಿಸಬಹುದು!

**ಬೆಲಾಟ್ರಿಕ್ಸ್ ಏರೊಸ್ಪೇಸ್:** ಬೆಂಗಳೂರು ಮೂಲದ ಬೆಲಾಟ್ರಿಕ್ಸ್ ಏರೊಸ್ಪೇಸ್ ಕಂಪನಿ ರಾಕೆಟ್ ಉಡಾವಣೆಯಲ್ಲಿ ಬಳಸುವ ಇಂಧನದಿಂದ ಉಂಟಾಗುವ ಮಾಲಿನ್ಯವನ್ನು ಕಡಿಮೆಗೊಳಿಸುವ ವಿನೂತನ ತಂತ್ರಜ್ಞಾನ ಅಭಿವೃದ್ಧಿಪಡಿಸಿದೆ. ಯಾವುದೇ ಉಪಗ್ರಹವನ್ನು ಬಾಹ್ಯಾಕಾಶಕ್ಕೆ ಹಾರಿಸಲು ಅದನ್ನು ಹೊತ್ತೊಯ್ಯುವ ರಾಕೆಟ್‌ನಲ್ಲಿ ಹೈಡ್ರಜೀನ್ ಇಂಧನ ಬಳಸುತ್ತಾರೆ. ಇದು ಅತ್ಯಂತ ಮಾಲಿನ್ಯಕಾರಕ ಎಂದು ಗೊತ್ತಾದ ದಿನದಿಂದ ಕಡಿಮೆ ಮಾಲಿನ್ಯದ ಇಂಧನದ ಅಭಿವೃದ್ಧಿಗಾಗಿ ಪ್ರಪಂಚದ ಎಲ್ಲ ಭಾಗಗಳ ವಿಜ್ಞಾನಿಗಳು ಶ್ರಮಿಸುತ್ತಿದ್ದರು. ತಮ್ಮ ತಂಡದ ಎಂಜಿನಿಯರುಗಳ ಸಂಶೋಧನೆಯ ಫಲವಾಗಿ ಹೆಚ್ಚಿನ ಇಂಧನ ಕ್ಷಮತೆ ನೀಡುವ ಹಾಗೂ ಕಡಿಮೆ ಮಾಲಿನ್ಯ ಮಾಡುವ

